ಡಿಸೆಂಬರ್ 23, 2016

**ಆರ್ ಬಿ ಐ ಡೆಹ್ರಾಡೂನ್ ನಲ್ಲಿ ಬ್ಯಾಂಕಿಂಗ್ ಲೋಕಪಾಲ್ ಕಾರ್ಯಾಲಯವನ್ನು ತೆರೆದಿದೆ**

ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಜಾಲದಲ್ಲಾದ ಗಮನಾರ್ಹ ಏರಿಕೆ ಮತ್ತು ಕಾನ್ಪುರ್ ನಲ್ಲಿರುವ ಪ್ರಸ್ತುತ ಬ್ಯಾಂಕಿಂಗ್ ಲೋಕಪಾಲ್ ಕಾರ್ಯಾಲಯವು ದೊಡ್ಡ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಾರಣದಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕಿಂಗ್ ಲೋಕಪಾಲ್ ನ ಕಾರ್ಯಾಲಯವನ್ನು ಭಾರತೀಯ ರಿಸರ್ವ್ ಬ್ಯಾಂಕ್, ಡೆಹ್ರಾಡೂನ್ ನಲ್ಲಿ ತೆರೆದಿದೆ .

ಭಾರತೀಯ ರಿಸರ್ವ್ ಬ್ಯಾಂಕ್ , ಡೆಹ್ರಾಡೂನ್ ಬ್ಯಾಂಕಿಂಗ್ ಲೋಕಪಾಲ್ ಕಾರ್ಯಾಲಯವು ಉತ್ತರ ಖಂಡ್ ರಾಜ್ಯಾದ್ಯಂತ ತನ್ನ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ ಹಾಗೂ ಇಲ್ಲಿಯ ತನಕ ಕಾನ್ಪುರ ಬ್ಯಾಂಕಿಂಗ್ ಲೋಕಪಾಲ್ ಕಾರ್ಯಾಲಯದ ವ್ಯಾಪ್ತಿಯಲ್ಲಿದ್ದ ಪಶ್ಚಿಮ ಉತ್ತರ ಪ್ರದೇಶದ ಜಿಲ್ಲೆಗಳಾದ ಸಹಾರನ್ ಪುರ್ , ಶಾಮ್ಲಿ (ಪ್ರಭುಧ್ ನಗರ್ ) , ಮುಜಾಫ್ಫುರ್ ನಗರ್ , ಭಾಗಪತ್ , ಮೀರತ್ , ಬಿಜ್ನೋರ್ ಹಾಗೂ ಅಮ್ರೋಹ್ (ಜ್ಯೋತಿಬ ಫುಲೆ ನಗರ್) ಮೇಲೆ ಕೂಡ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

ಪತ್ರಿಕಾ ಪ್ರಕಟಣೆ : 2016-2017/1642

ಅಜಿತ್ ಪ್ರಸಾದ್
ಸಹಾಯಕ ಸಲಹೆಗಾರರು